within a minute's time, the Fire Force personnel rushed to the spot with two fire units. By then, the fire had spread to the roof of the building and the paper bundles stocked inside had cought fire. The tanker unit which was pressed into service had to make three trips to the water source situated at a distance of two furlongs from the place of the fire accident. The burning paper bundles were pulled out in stages with utmost care and caution, and it took nearly two hours and forty three minutes for the Fire Force personnel to extinguish the fire completely. It is reported that about 5 to 6 bales of paper, 4 to 5 tables, 3 wooden benches, roofing of the building and one pigeon hole rack were damaged in the fire. The total loss is estimated to be less than Rs. 10,000.

Due to the prompt action taken, the Fire Force personnel were able to save all important records of the Press and also the machineries and prevent damage to the neighbouring thatched buildings and other properties.

ಶ್ರೀ ಎಂ. ನಾಗಪ್ಪ.—ಮಾನ್ಯ ಉಪಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ, "within a minute's time the fire force personnel rushed to the spot with two fire units" ಎಂದು ಹೇಳಿದ್ದಾರೆ. ಫೈರ್ ಸ್ಟೇಷನ್ನಿಗೂ ಮತ್ತು ಕೋ ಆಪರೇಟಿವ್ ಪ್ರಿಂಟಿಂಗ್ ಪ್ರೆಸ್ಸಿಗೂ ಒಂದು ಮೈಲಿ ದೂರ ಇದೆ. ಒಂದು ನಿಮಿಷದಲ್ಲಿ ಒಂದು ಮೈಲಿ ದೂರ ಹೇಗೆ ಫೈರ್ ಬ್ರಿಗೇಡ್‌ನವರು ಬಂದರು ?

Sri MANIK RAO PATIL.—I don't think there is any difficulty to reach the spot within a minute's time. As just now the hon. Member stated that the distance between the place at which accident took place and the fire station is only one mile. If the fire Force Unit proceed at the rate of 60 miles per hour, there is no difficulty for them to reach the spot within a minute's time.

Collection of Land Revenue in Some Taluks

2-30 P.M.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ನ್ಯಾಯಮಿ, ಒಂದು ಪ್ರಾಮುಖ್ಯವಾದ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಭೂಕಂದಾಯದ ವಿಚಾರದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವ ಕಾಲದಲ್ಲಿ ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಟ್ಟರು. ಇದಕ್ಕೆ ಸಂಬಂಧ ಪಟ್ಟಹಾಗೆ ಒಂದು ತಿದ್ದುಪಡಿಯ ಮಸೂದೆಯನ್ನು ತರುವವರೆಗೆ ದೇಶದ ಎರ್ನಾ ಕಡೆಗಳಲ್ಲಿಯೂ ಕೂಡ ಬಲಾತ್ಕಾರವಾಗಿ ಮತ್ತು ಕಡ್ಡಾಯವಾಗಿ ಕಂದಾಯ ವಸೂಲು ಮಾಡಬಾರದು ಎಂದು ಸಂಬಂಧಪಟ್ಟ ಅಧಿಕಾರಿಗಳು ಎಲ್ಲರಿಗೂ ಆಜ್ಞೆಯನ್ನು ಮಾಡುತ್ತೇವೆಂದು ಈ ಸಭೆಗೆ ಭರವಸೆಯನ್ನು ಸರ್ಕಾರದವರು ಕೊಟ್ಟರು. ಇತ್ತೀಚೆಗೆ ಅನೇಕ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಸ್ಥಳೀಯ ಅಧಿಕಾರಿಗಳು ಈ ಬಗ್ಗೆ ಸರ್ಕಾರದವರು ಲಿಖಿತ ಮೂಲಕ ಆಜ್ಞೆಯನ್ನು ಕಳುಹಿಸಿಲ್ಲವೆಂದು ಹೇಳಿದರು. ಆ ಕಾರಣದಿಂದ ಬಲಾತ್ಕಾರವಾಗಿ ರೈತರಿಗೆ ಕೊಂದರೆ ಕೊಟ್ಟು ಕಂದಾಯ ವಸೂಲು ಮಾಡಿದ ಅನೇಕ ವರದಿಗಳು ಬಂದಿವೆ. ಸರ್ಕಾರ ಈ ರೀತಿ ಮಾಡಿದರೆ, ಶಾಸನಸಭೆಗೆ ಕೊಟ್ಟಂತಹ ಭರವಸೆಗೆ ಮರ್ಯಾದೆ ಏನು ಬಂತು ? ಸರ್ಕಾರ ತನ್ನ ಭರವಸೆಯನ್ನು ಈಡೇರಿಸುವ ಕಾಲದಲ್ಲಿ ವಿಳಂಬವಾಗಿ ವರ್ತಿಸಿದ್ದರಿಂದ ಸ್ಥಳೀಯ ಅಧಿಕಾರಿಗಳು ಕಂದಾಯ ವಸೂಲು ಮಾಡುವ ಆಜ್ಞೆಯನ್ನು ಜಾರಿಗೆ ತಂದಿದ್ದಾರೆ. ಸರ್ಕಾರದ ಕಾರ್ಯಕ್ರಮ ಚರ್ಚೆ ಇಲ್ಲ. ಇದಕ್ಕೆ ಕಾರಣ ಏನು ಎಂದು ತಿಳಿಯಬಯಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನನಗೆ ಅನೇಕ ಕಡೆಗಳಿಂದ ಕಾಗದಗಳು ಬಂದಿವೆ. ಸ್ಥಳೀಯ ಅಧಿಕಾರಿಗಳು ಕಡ್ಡಾಯವಾಗಿ ಜನರಿಗೆ ತೊಂದರೆ ಕೊಟ್ಟು ಮನೆಗಳಿಂದ ಎಮ್ಮೆ ಹಸುಗಳನ್ನು ಹೊರಗೆ ಹಾಕುತ್ತಿದ್ದಾರೆಂದು ಕನಕಪುರದಿಂದ ಮತ್ತು ಇತರ ಕಡೆಗಳಿಂದ ವರದಿಗಳು ಬಂದಿವೆ. ನಾನು ಒಂದು ಕಾಲಿಂಗ್ ಅಟೆಂಷನ್ ನೋಟೀಷನ್ನು ಕಳುಹಿಸಿದ್ದೆ. ತಾವು ಅದನ್ನು ತಳ್ಳಿಹಾಕಿದ್ದೀರಿ. ಈ ರೀತಿ ಮಾಡಿದರೆ, ರೈತರಿಗೆ ತೊಂದರೆಯಾಗುತ್ತದೆ. ನಾವು ಮೂರು ದಿವಸ ಧರಣಿ ಮುಷ್ಕರ ಮಾಡಿದಮೇಲೆ ಕೊನೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರು. ಈಗ ಅದರಂತೆ ನಡೆದುಕೊಳ್ಳುತ್ತಾ ಇಲ್ಲವೆಂದು ದೊಡ್ಡಬಳ್ಳಾಪುರ, ಕನಕಪುರ ಮುಂತಾದ ಕಡೆಗಳಿಂದ ವರದಿಗಳು ಬಂದಿವೆ. ಆದ್ದರಿಂದ ಸರ್ಕಾರದವರು ಕೂಡಲೇ ಸರಿಯಾದ ಆಶ್ವಾಸನೆ ಕೊಟ್ಟು ಅಧಿಕಾರಿಗಳಿಗೆ ಮಾರ್ಗದರ್ಶನ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

† Sri D. B. KALMANKAR (Aland).—On the other day when the statement was made by the House, it was said that coercive measures will not be taken. Regarding the suspension of land Revenne, I had given a Call attention Notice to which it was said that crop cutting will be made and if it is found that crop is less than 4 annas worth, there will be complete suspension of land revenue. I wrote to the Deputy Commissioner in this regard. He said that crop cutting will be made and then the suspension will be made after assessment of the crop condition. In Aland Taluka the rabi crop has completely failed and it is less than 4 annas. Now coercive measures have been adopted to collect the arrears inspite of assurance given by the Government. The Member of the Legislative Council from that part told me that coercive measures are taken to collect the arrears. Therefore, I request the Hon. Minister for Revenue to give instructions direct to the Tahasildar not to make any collection till the matter is settled.

† ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಆದೇಶಗಳನ್ನು ಒಟ್ಟಾಗಿ ಕಳಿಸಿಕೊಟ್ಟಿದ್ದಾರೋ ಅಥವಾ ಬೇರೆ ಬೇರೆಯಾಗಿ ಕಳಿಸಿಕೊಟ್ಟಿದ್ದಾರೋ ಎಂಬುದು ಗೊತ್ತಿಲ್ಲ. ಇವತ್ತಿನದಿವಸ ಚಿತ್ರದುರ್ಗ ಜಿಲ್ಲೆಯ ಧರ್ಮಸಾಗರದಲ್ಲಿ ಅಲ್ಲಿಯ ಅಧಿಕಾರಿಗಳು ಜನರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ. ಅಲ್ಲಿಯ ಹೆಣ್ಣುಮಕ್ಕಳ ಕಿವಿಯ ಆಭರಣಗಳನ್ನು ಹರಾಜು ಮಾಡಿದ್ದಾರೆ. ನಮ್ಮ ಭಾಗದ ಬೆಟರ್‌ಮೆಂಟ್ ರೆವಿನ್ಯೂ ಡಿವಿಜನ್ ಆಫೀಸರ್ ಅವರು ಬಹಳ ಚಿಕ್ಕವಯಸ್ಸಿನವರು, 25 ವರ್ಷವಾಗಿರಬಹುದು. ಅನುಭವ ಸಾಲದು. ಅವರು ಹಿರಿಯೂರಿಗೆ 40 ಮೈಲಿ ದೂರದಲ್ಲಿರುವ ಅನಕ್ಷರಸ್ಥ ಗೊಲ್ಲರನ್ನು ಗಾಯಿತ್ರಿ ಜಲಾಶಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ನಿಷ್ಕರ್ಷೆ ಮಾಡಲು ಬರಬೇಕೆಂದು ಹೇಳಿಕಳಿಸಿದ್ದರು. ಅವರಿಗೆ ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿರುವ ಫಾರಂಗಳನ್ನು ಸಹ ಕಳಿಸಿದ್ದಾರೆ ನಾನು ನನ್ನೆ ಅಲ್ಲಿಗೆ ಹೋದಾಗ ಆ ಜನರು ಆ ಫಾರಂಗಳನ್ನು ನನಗೆ ತೋರಿಸಿ ಏನು ಮಾಡುವುದು ಎಂದು ಕೇಳಿದರು. ನಾನು ಆ ಆಫೀಸರ್‌ಗೆ ಆ ರೀತಿಯಿಂದ ಬಡ ರೈತಾಪಿ ಜನರಿಗೆ ತೊಂದರೆ ಕೊಡುವುದು ಸರಿಯಲ್ಲ, ಅವರು ಒಬ್ಬಂಟಿಗರಾದ್ದರಿಂದ ಅವರ ಹಳ್ಳಿ ಬಿಟ್ಟು ಬರುವುದು ಕಷ್ಟವಾಗುತ್ತದೆ ಎಂದು ಒಂದು ಕಾಗದವನ್ನು ಬರೆದು ಕಳಿಸಿದೆ. ಅವರ ಕಷ್ಟವನ್ನು ನೋಡರಾದರೆ ಇಲ್ಲಿ ಹೇಳಬೇಕೆಂದರೆ ಅಧ್ಯಕ್ಷರು ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ಪರಿಸ್ಥಿತಿ ಈ ರೀತಿ ಮುಂದುವರಿಯುವುದಕ್ಕೆ ಬಿಡಬಾರದೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಜಿಲ್ಲಾಧಿಕಾರಿಗಳಿಗೆ ಏನು ಆದೇಶ ಕೊಡರಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಈಗ ಕುರುಡನನ್ನು ಅನುನಯಿಸಿಕೊಂಡು ಹೋದಂತಾಗಿದೆ. ಆದ್ದರಿಂದ ನಮಗೆ ಸ್ಪಷ್ಟವಾದ ಹೇಳಿಕೆ ಬೇಕು.

ಶ್ರೀ ವಾಟಾಳ್ ನಾಗರಾಜ್.—ರೈತರಿಗೆ ಇದೇ ರೀತಿ ತೊಂದರೆ ಕೊಟ್ಟರೆ ಆಯಾ ಭಾಗದ ತಹಸೀಲ್‌ದಾರರಿಗೆ ಅಲ್ಲಿಯ ರೈತರಿಂದ ಛೇರಾವೋ ಮಾಡಿಸಬೇಕಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ಸದಸ್ಯರುಗಳು ಹೇಳಿದಂತೆ ಕಂದಾಯದ ವಸೂಲಿ ಕಾರ್ಯ ನನ್ನ ಭಾಗದಲ್ಲಿ ನಡೆದಿಲ್ಲ. ಅಧಿಕಾರಿಗಳಿಂದ ಕಿರುಕುಳವಾಗಿಲ್ಲ. ಮತ್ತು ಆ ವಿಚಾರದಲ್ಲಿ ನನಗೆ ನನ್ನ ಕ್ಷೇತ್ರದ ಜನರಿಂದ ಒಂದು ಕಾಗದವೂ ಸಹ ಬಂದಿಲ್ಲ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ತಾವು ಗೌರ್ನಮೆಂಟ್ ಏಜೆಂಟರು. ಅದಕ್ಕೇ ಆ ರೀತಿ ಹೇಳುತ್ತಿರಿ. ಈ ಸರ್ಕಾರಕ್ಕೆ ಒಂದು ನೀತಿ ಇಲ್ಲ, ರೀತಿ ಇಲ್ಲ, ಹೇಳಿದಂತೆ ನಡೆದುಕೊಳ್ಳುವುದಿಲ್ಲ. * * * *

†ಶ್ರೀ ಹೆಚ್. ವಿ. ಕಾಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಇಲ್ಲಿ ಕೆಲವು ತಕರಾರುಗಳು ಕಂದಾಯದ ವಸೂಲ ಕ್ರಮದಲ್ಲಿ ಆಗಿರುವುದರ ಬಗ್ಗೆ ಹೇಳಿದ್ದಾರೆ. ಹಿಂದೆ ಇದೇ ಮಾನ್ಯ ಸಭೆಯಲ್ಲಿ ಸರಕಾರ ಏನು ಒಂದು ಅಂಡರ್‌ಟೇಕಿಂಗ್ ತೆಗೆದುಕೊಂಡು ಇಲ್ಲಿ ಹೇಳಿಕೆ ಕೊಟ್ಟೆವೋ ಅದೇ ದಿನವೇ ಎಲ್ಲ ಡೆಪ್ಯೂಟಿ ಕಮಿಷನರುಗಳ ಕಡೆಗೆ ವೈರ್‌ಲೆಸ್ ಮೂಲಕ ಹಾಗೂ ಟೆಲಿಗ್ರಾಂಗಳ ಮೂಲಕ ಸ್ಪಷ್ಟವಾದ ಸೂಚನೆಗಳನ್ನು ಕಳುಹಿಸಲಾಗಿದೆ. ಅಲ್ಲದೆ ಅಲ್ಲ ರುವ ಆವರ ಕೆಳಗಿನ ಅಧಿಕಾರಿಗಳಾದ ಅಮಲ್ದಾರರುಗಳು ವಸೂಲು ಮಾಡುವುದನ್ನು ತಡೆ ಹಿಡಿಯಬೇಕು ಎಂದು ಹೇಳಲಾಗಿದೆ. ನಿಯಮಕ್ಕೆ ವಿರೋಧವಾಗಿ ಯಾವ ಉಗ್ರ ಕ್ರಮಗಳನ್ನು ತೆಗೆದುಕೊಳ್ಳಕೂಡದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ನಾವು ಬರೆದ ಕಾಗದಕ್ಕೆ ಉತ್ತರವಾಗಿ ನಾವು ಕೊಟ್ಟ ಸೂಚನೆಯನ್ನು ಅಕ್ಷರಶಃ ಪಾಲಿಸಿ ಇಂತಿಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಪತ್ರಗಳನ್ನು ಬರೆದಿದ್ದಾರೆ. ನಮಗೆ ಬಂದಿರುವ ಎಲ್ಲ ಕಾಗದ ಪತ್ರಗಳನ್ನೂ ಈ ಸಭೆಯ ಮುಂದೆ ಇಡುತ್ತೇನೆ. ಪ್ರತ್ಯೇಕವಾಗಿ ಅದನ್ನು ನೋಡಿಕೊಂಡು ಮಾನ್ಯ ಸದಸ್ಯರು ಇದರಲ್ಲೇನಾದರೂ ದೋಷಗಳಿವೆ ಎಂದು ತಿಳಿಸಿದರೆ ಅವನ್ನು ತಿದ್ದಿಕೊಳ್ಳುತ್ತೇವೆ. ನಾವು ಹೇಳಿಕೆ ಕೊಟ್ಟ ನಂತರ ಎಲ್ಲ ಕಡೆಯೂ ನಮ್ಮ ಸೂಚನೆಯಂತೆ ಅಮಲದಾರರುಗಳು ನಡೆದುಕೊಂಡಿರಬಹುದು, ಆದರೆ ಕೆಲವು ಕಡೆ ಇನ್ನೂ ಹಾಗೆ ಮಾಡದೇ ಇರಬಹುದು. ಆದರೆ ಅಲ್ಲಿ ಎಮ್ಮೆ ಇತ್ಯಾದಿಗಳನ್ನು ವಶಪಡಿಸಿಕೊಂಡರು ಎನ್ನುವುದಕ್ಕೆ ನಮಗೆ ಯಾವ ವರದಿಯೂ ಬಂದಿಲ್ಲ. ರ್ಯಾಂಡ್ ರೆವೆನ್ಯೂ ಅಲ್ಲದೆ ಇತರ ವಿವಾದ ಟ್ಯಾಕ್ಸ್‌ಗಳ ವಸೂಲು ಕೂಡ ಬರುತ್ತದೆ. ಇವನ್ನು ವಸೂಲು ಮಾಡುವಾಗಲೂ ಜನಗಳಿಗೆ ತ್ರಾಸಾಗದಂತೆ ಮಾಡಬೇಕು ಎಂದು ಸ್ಪಷ್ಟವಾದ ಸೂಚನೆಗಳನ್ನು ಕೊಡಲಾಗಿದೆ. ಇವಿಷ್ಟು ವಿಚಾರಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ಬರಲಿ ಎಂದು ಇಷ್ಟು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ನಿಲುವಳಿ ಸೂಚನೆ ಏನಾಯಿತು ?

ಅಧ್ಯಕ್ಷರು.—ಅದಕ್ಕೆ ನಾನು ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗಾರಾಜ್.—ಇನ್ನೊಂದು ಪ್ರಾಮುಖ್ಯವಾದ ಪ್ರಶ್ನೆ ಇಂದು ಇರುವ ಪ್ರಜಾವಾಣಿಯಲ್ಲಿ ಬಂದಿದೆ. ಅದು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ರಾಜೀನಾಮೆ ಎಂದು. ಸ್ವಾಮಿ, ಮೊನ್ನೆ ನಾವು ಶ್ರೀ ಶೈಲಕ್ಕೆ ಹೋಗಿದ್ದಾಗ ಇದು ನಡೆದದ್ದು. ರಾಜ್ಯದ ಮುಖ್ಯಮಂತ್ರಿಗಳ ಒಬ್ಬರ ರಾಜೀನಾಮೆ ಅದನ್ನು ಅಷ್ಟು ಲಘುವಾಗಿ ಪರಿಗಣಿಸಬೇಡಿ.

ಅಧ್ಯಕ್ಷರು.—ತಾವು ಬರೆದುಕೊಡಿ.

ಶ್ರೀ ವಾಟಾಳ್ ನಾಗರಾಜ್.—ಅದು ಬರೆದುಕೊಡುವ ವಿಷಯವಲ್ಲ.

ಅಧ್ಯಕ್ಷರು.—ಅದಕ್ಕೆಲ್ಲಾ ಪ್ರೊಸೀಜರ್ ಇದೆ. ಏನು ಇದ್ದರೂ ಅದನ್ನು ಬರೆದುಕೊಡಬೇಕು

Retention of Matters ordered to be expunged

ಶ್ರೀ ಎಚ್. ಎನ್. ನಂಜೇಗೌಡ.—ಈಮೊತ್ತು ಬಿರ್ ಮೇರೆ ಮಾತನಾಡಬೇಕಾದರೆ ಭಯ ವಾಗುತ್ತದೆ. ಇದನ್ನು ತಮ್ಮ ಅವಗಾಹನೆಗೆ ತರದೇ ನಾವು ಯಾರಿಗೆ ಹೇಳೋಣ ? ನಾನು ಏನು ಹೇಳಿದೆ ಅದನ್ನು ಇಲ್ಲಿ ಓದುತ್ತೇನೆ. ಅದು ಅಫಿಷಿಯಲ್ ರಿಪೋರ್ಟ್. ನಾನು ಬಿಲ್‌ಮೇರೆ ಮಾತನಾಡತಕ್ಕಂಥ ಕಾಲದಲ್ಲಿ ಈ ರೀತಿ ಹೇಳಿದೆ : "Advice of the High Court means normally that the High Court would have mentioned this point in the course of a judgement in a particular case. If it is not so, we have to take it that there must be some correspondence between the Government and the High Court on this point which gives room for some doubt in

**** Matter not recorded as ordered by the Chair.